Akashvani: Bangalore
National Bulletin In Kannada
11.07.2026: 7.35AM
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**********

ಮುಖ್ಯಾಂಶಗಳು :

- ಭಾರತ - ನ್ಯೂಜಿಲೆಂಡ್ ನಡುವೆ ರಕ್ಷಣಾ, ಪಶುಸಂಗೋಪನೆ ಸೇರಿ ಐದು ಪ್ರಮುಖ ಒಪ್ಪಂದಗಳಿಗೆ ಸಹಿ
- ಇಂಡೋ - ಪೆಸಿಫಿಕ್ ಪ್ರಾಂತ್ಯದಲ್ಲಿ ಶಾಂತಿ, ಸ್ಥಿರತೆ ಭದ್ರತೆ ಬಲವರ್ಧನೆಯಲ್ಲಿ ಭಾರತ - ನ್ಯೂಜಿಲೆಂಡ್ ಪ್ರಮುಖ ಪಾತ್ರ - ಪ್ರಧಾನಿ ನರೇಂದ್ರ ಮೋದಿ
- ದೇಶದ ಕರಾವಳಿಯ ಸಂಪೂರ್ಣ ಭದ್ರತೆಗೆ ಸರ್ಕಾರ ಕಠಿ ಬದ್ಧ - ಗೃಹ ಸಚಿವ ಅಮಿತ್ ಶಾ ಪ್ರತಿಪಾದನೆ
- ಸ್ವದೇಶಿ ನಿರ್ಮಿತ ಮಹೇಂದ್ರಗಿರಿ-ಎಫ್-೩೮ ಯುದ್ಧನೌಕೆ ನೌಕಾಪಡೆಗೆ ಇಂದು ಸೇರ್ಪಡೆ
- ಫಿಫಾ ವಿಶ್ವಕಪ್; ಬೆಲ್ಜಿಯಂ ವಿರುದ್ಧ ಸ್ಪೇನ್‌ಗೆ ರೋಚಕ ಗೆಲುವು; ಸೆಮಿಫೈನಲ್ ಪ್ರವೇಶ

********

ರಕ್ಷಣೆ, ಪಶುಸಂಗೋಪನೆ, ಪ್ರವಾಸೋದ್ಯಮ, ಕ್ರೀಡೆ ಹಾಗೂ ವಿಪತ್ತು ನಿರ್ವಹಣೆ ಸೇರಿದಂತೆ ಐದು ಪ್ರಮುಖ ಒಪ್ಪಂದಗಳಿಗೆ ಭಾರತ ಮತ್ತು ನ್ಯೂಜಿಲೆಂಡ್ ಇಂದು ಸಹಿ ಹಾಕಿವೆ. ನ್ಯೂಜಿಲೆಂಡ್‌ನ ಆಕ್ಲೆಂಡ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಅಲ್ಲಿನ ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್ ನಡುವೆ ನಡೆದ ನಿಯೋಗ ಮಟ್ಟದ ಮಾತುಕತೆ ನಂತರ ಒಪ್ಪಂದಗಳನ್ನು ವಿನಿಮಯ ಮಾಡಿಕೊಳ್ಳಲಾಯಿತು. ಸೇನಾ ಸಹಕಾರ ಮತ್ತು ಎರಡೂ ದೇಶಗಳ ನಡುವಿನ ಕಾರ್ಯತಂತ್ರ ಮಾತುಕತೆ ಮುಂದುವರಿಸುವ ಉದ್ದೇಶವನ್ನು ರಕ್ಷಣಾ ಒಡಂಬಡಿಕೆ ಹೊಂದಿದೆ. ಸಂಶೋಧನೆ, ಆವಿಷ್ಕಾರ ಮತ್ತು ಉತ್ತಮ ವಿಧಾನಗಳನ್ನು ಪಶುಸಂಗೋಪನೆ ಕುರಿತ ಒಪ್ಪಂದ ಉತ್ತೇಜಿಸಲಿದೆ. ಪ್ರವಸೋದ್ಯಮ ಕುರಿತ ಒಪ್ಪಂದವು ಪ್ರವಾಸ ವಲಯದಲ್ಲಿ ಸಹಕಾರವನ್ನು ಬಲಪಡಿಸಲಿದೆ.

ಕ್ರೀಡಾಭಿವೃದ್ಧಿ ಮತ್ತು ಅಥ್ಲೀಟ್‌ಗಳ ವಿನಿಮಯದಲ್ಲಿ ಸಹಭಾಗಿತ್ವವನ್ನು ಬಲಪಡಿಸಲು ಜಂಟಿ ಕಾರ್ಯ ಯೋಜನೆಯನ್ನೂ ಸಹ ಎರಡೂ ದೇಶಗಳು ಅನುಮೋದಿಸಿವೆ. ವಿಪತ್ತು ನಿರ್ವಹಣಾ ಕುರಿತ ಒಡಂಬಡಿಕೆಯು, ವಿಪತ್ತು ಎದುರಿಸುವ ಸನ್ನದ್ಧತೆ, ತುರ್ತು ನಿರ್ವಹಣೆಯಲ್ಲಿ ಸಹಕಾರವನ್ನು ಹೆಚ್ಚಿಸಲಿವೆ. ಈ ಐದೂ ಒಪ್ಪಂದಗಳು ಭಾರತ - ನ್ಯೂಜಿಲೆಂಡ್ ನಡುವಿನ ವೃದ್ಧಿಯಾಗುತ್ತಿರುವ ಪಾಲುದಾರಿಕೆಗೆ ಮತ್ತು ಕಾರ್ಯತಂತ್ರ, ಆರ್ಥಿಕ ಮತ್ತು ಜನರ ನಡುವಿನ ಸಂಪರ್ಕ ವಲಯಗಳಲ್ಲಿ ಸಹಕಾರ ಭದ್ರತೆಗೆ ನಿದರ್ಶನವಾಗಿವೆ. ಇದಕ್ಕೂ ಮುನ್ನ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು, ನ್ಯೂಜಿಲೆಂಡ್‌ನ ತಮ್ಮ ಪ್ರವಾಸ ಎರಡೂ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧಗಳಲ್ಲಿ ಮೈಲುಗಲ್ಲಾಗಲಿದ್ದು, ಬಾಂಧವ್ಯಗಳ ವೃದ್ಧಿಗೆ ಹೊಸ ವೇಗ ನೀಡಲಿದೆ. ಕಡಿಮೆ ಅವಧಿಯಲ್ಲಿ ಮುಕ್ತ ವ್ಯಾಪಾರ ಒಪ್ಪಂದ ಪ್ರಕ್ರಿಯೆಗಳನ್ನು ಪೂರ್ಣಗೊಳಿಸುವ ನ್ಯೂಜಿಲೆಂಡ್‌ನ ಕಾರ್ಯಗಳು ಶ್ಲಾಘನೀಯ. ಎರಡೂ ದೇಶಗಳು ಇದೀಗ ಕಾರ್ಯತಂತ್ರ ಪಾಲುದಾರಿಕೆ ಸ್ಥಾಪನೆಯತ್ತ ಮಹತ್ವದ ಹೆಜ್ಜೆ ಇಟ್ಟಿವೆ ಎಂದು ಹೇಳಿದರು. ಇಂಡೋ-ಪೆಸಿಫಿಕ್ ಪ್ರಾಂತ್ಯದಲ್ಲಿ ಶಾಂತಿ, ಸ್ಥಿರತೆ ಮತ್ತು ಭದ್ರತೆ ಬಲಪಡಿಸಲು ಭಾರತ ಮತ್ತು ನ್ಯೂಜಿಲೆಂಡ್ ಪ್ರಮುಖ ಪಾತ್ರ ವಹಿಸಲಿವೆ. ನ್ಯೂಜಿಲೆಂಡ್‌ನ ತಮ್ಮ ಈ ಪ್ರವಾಸವು ದ್ವಿಪಕ್ಷೀಯ ಬಾಂಧವ್ಯಗಳನ್ನು ಮತ್ತಷ್ಟು ವೃದ್ಧಿಸಿ, ಜಾಗತಿಕ ಶಾಂತಿ ಮತ್ತು ಸಮೃದ್ಧತೆಯನ್ನು ಹೆಚ್ಚಿಸುವ ನಿರೀಕ್ಷೆ ಇದೆ ಎಂದು ಹೇಳಿದರು. ಕ್ರಿಸ್ಟೋಫರ್ ಲಕ್ಸನ್ ಮಾತನಾಡಿ, ೪೦ ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಭಾರತೀಯ ಪ್ರಧಾನಿಯೊಬ್ಬರು ನ್ಯೂಜಿಲೆಂಡ್‌ಗೆ ಭೇಟಿ ನೀಡುತ್ತಿರುವುದು ಐತಿಹಾಸಿಕ ಮೈಲುಗಲ್ಲಾಗಿದೆ. ವಾಣಿಜ್ಯ ಕಾರ್ಯಸೂಚಿಯಲ್ಲಿ ಎರಡೂ ದೇಶಗಳಲ್ಲಿ ಮಹತ್ವದ ಪ್ರಗತಿ ಸಾಧಿಸಿವೆ. ಮುಕ್ತ ವ್ಯಾಪಾರ ಒಪ್ಪಂದವನ್ನೂ ಮೀರಿ ಎರಡೂ ದೇಶಗಳ ಸಂಬಂಧಗಳು ವಿಸ್ತರಿಸುತ್ತಿವೆ ಎಂದು ಹೇಳಿದರು. ಇಂದು ಪ್ರಧಾನಿ ಅವರು, ಪ್ರಮುಖ ವಾಣಿಜ್ಯ ಮತ್ತು ಕ್ರೀಡಾ ಗಣ್ಯರೊಂದಿಗೆ ಸಂವಾದ ನಡೆಸಲಿದ್ದಾರೆ.

********

ದೇಶದ ಕರಾವಳಿಯ ಸಂಪೂರ್ಣ ಭದ್ರತೆಗೆ ಸರ್ಕಾರ ಕಟಿಬದ್ಧವಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ದೆಹಲಿಯಲ್ಲಿ ನಿನ್ನೆ ಕೇಂದ್ರ ಬಂದರು, ಹಡಗು ಮತ್ತು ಜಲಮಾರ್ಗ ಖಾತೆ ಸಚಿವ ಸರ್ಬಾನಂದ್ ಸೋನೋವಾಲ್ ಅವರೊಂದಿಗೆ ಬಂದರು ಭದ್ರತೆ ಬ್ಯೂರೋನ ಪ್ರಗತಿ ಪರಿಶೀಲನಾ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು. ಬಂದರು ಭದ್ರತೆಗೆ ಕೇವಲ ಪರವಾನಗಿ ಹೊಂದಿದ ಖಾಸಗಿ ಭದ್ರತಾ ಸಂಸ್ಥೆಗಳಿಗೆ ಅವಕಾಶ ನೀಡಲಾಗುವುದು ಮತ್ತು ಕೇಂದ್ರೀಯ ಭದ್ರತಾ ಪಡೆಯಿಂದ ತರಬೇತಿ ಹೊಂದಿದ ಸಿಬ್ಬಂದಿಯನ್ನು ಮಾತ್ರ ನಿಯೋಜಿಸಲಾಗುವುದು. ಪ್ರಸ್ತುತ ಇರುವ ಮೂಲಸೌಕರ್ಯವನ್ನು ಆರಂಭದಲ್ಲಿಯೇ ಬಳಸಿಕೊಂಡು, ಬಂದರು ಭದ್ರತಾ ತರಬೇತಿ ಸಂಸ್ಥೆ, ಕಾರ್ಯ ನಿರ್ವಹಿಸಬೇಕು. ಬಂದರು ಭದ್ರತಾ ಬ್ಯೂರೋ ಅಡಿ ನಿಯೋಜನೆಗೊಂಡ ಎಲ್ಲ ಭದ್ರತಾ ಸಿಬ್ಬಂದಿಯ ಸಮಗ್ರ ಮಾಹಿತಿಯನ್ನು ರೂಪಿಸಬೇಕು ಎಂದು ಅಧಿಕಾರಿಗಳಿಗೆ ಸಚಿವರು ಕರೆ ನೀಡಿದರು. ಬಂದರು ಭದ್ರತಾ ಬ್ಯೂರೋ ವ್ಯಾಪ್ತಿಗೆ ಬರುವ ಎಲ್ಲಾ ಬಂದರುಗಳಲ್ಲಿ ಕಂಟೈನರ್ ಸ್ಕ್ಯಾನಿಂಗ್ ವ್ಯವಸ್ಥೆ ಮಾಡಬೇಕು. ವಿಶಾಖಪಟ್ಟಣಂ ಬಂದರು, ಜವಾಹರಲಾಲ್ ನೆಹರು ಬಂದರು ಮತ್ತು ಮುಂದ್ರಾ ಬಂದರು ಸೇರಿದಂತೆ ಪ್ರಮುಖ ಬಂದರುಗಳಲ್ಲಿ ಉದ್ದೇಶಿತ ಭದ್ರತಾ ಸಿದ್ಧತೆಗಳ ಪ್ರಯೋಗಾರ್ಥ ಕಾರ್ಯವನ್ನು ಆರಂಭಿಸುವಂತೆ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಗೆ ಸಚಿವರು ಸೂಚಿಸಿದರು. ಸಭೆಯಲ್ಲಿ ಕೇಂದ್ರ ಗೃಹ ಕಾರ್ಯದರ್ಶಿ, ಬೇಹುಗಾರಿಕೆ ಬ್ಯೂರೋ ನಿರ್ದೇಶಕರು, ಗಡಿ ನಿರ್ವಹಣಾ ಕಾರ್ಯದರ್ಶಿ, ಬಂದರು, ಹಡಗು, ಜಲಮಾರ್ಗಗಳ ಸಚಿವಾಲಯದ ಕಾರ್ಯದರ್ಶಿ, ಮೀನುಗಾರಿಕೆ ಇಲಾಖೆ ಕಾರ್ಯದರ್ಶಿ, ಸಿಐಎಸ್‌ಎಫ್‌ನ ಮಹಾನಿರ್ದೇಶಕರು ಹಾಗೂ ಇತರೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

********

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಇಂದು ಬಿಹಾರದ ಗಯಾಕ್ಕೆ ಭೇಟಿ ನೀಡಲಿದ್ದಾರೆ. ಈ ಸಂದರ್ಭದಲ್ಲಿ ಅವರು, ಬಿಹಾರ ಸಾರ್ವಜನಿಕ ಆಡಳಿತ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯಲ್ಲಿ ಆಯೋಜಿಸಲಾಗಿರುವ ಬಿಹಾರ ವಿಧಾನಸಭೆಯ ಸದಸ್ಯರ ತರಬೇತಿ ಕಾರ್ಯಕ್ರಮದ ಉದ್ಘಾಟನಾ ಅಧಿವೇಶನವನ್ನುದ್ದೇಶಿಸಿ ಮಾತನಾಡಲಿದ್ದಾರೆ.

********

ಭಾರತೀಯ ನೌಕಾಪಡೆಯ ಸ್ವದೇಶಿ ನಿರ್ಮಿತ ಪ್ರಾಜೆಕ್ಟ್-೧೭ಎ ಸರಣಿಯ ಆರನೇ ಸ್ಟೆಲ್ತ್ ಯುದ್ಧನೌಕೆ ಮಹೇಂದ್ರಗಿರಿ-ಎಫ್-೩೮ ಇಂದು ವಿಶಾಖಪಟ್ಟಣದಲ್ಲಿ ಭಾರತೀಯ ನೌಕಾಪಡೆಗೆ ಸೇರ್ಪಡೆಯಾಗಲಿದೆ. ರಕ್ಷಣಾ ಸ್ವಾವಲಂಬನೆ ಮತ್ತು ಸ್ವದೇಶಿ ಯುದ್ಧನೌಕೆ ನಿರ್ಮಾಣದ ಭಾರತದ ಪಯಣದಲ್ಲಿ ಇದು ಮತ್ತೊಂದು ಮಹತ್ವದ ಮೈಲುಗಲ್ಲಾಗಲಿದೆ. ವಿಶಾಖಪಟ್ಟಣದಲ್ಲಿ ನೌಕಾ ಸಿಬ್ಬಂದಿಯನ್ನುದ್ದೇಶಿಸಿ ಮಾತನಾಡಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, ಹಿಂದೂ ಮಹಾಸಾಗರ ಪ್ರಾಂತ್ಯದಲ್ಲಿ ಶಾಂತಿ ಮತ್ತು ಸ್ಥಿರತೆಗೆ ಭಾರತ ಬದ್ಧವಾಗಿದೆ. ಸಂಕೀರ್ಣ ಜಾಗತಿಕ ಭದ್ರತಾ ಪರಿಸರದ ನಡುವೆಯೂ ಭಾರತೀಯ ನೌಕಾಪಡೆ ದೇಶದ ಸಾಗರ ವಲಯದ ಹಿತಾಸಕ್ತಿಯನ್ನು ಕಾಪಾಡುತ್ತಿದೆ. ಹಿಂದೂ ಮಹಾಸಾಗರ ಪ್ರಾಂತ್ಯದಲ್ಲಿ ಭಾರತ, ಅತಿದೊಡ್ಡ ಮತ್ತು ಅತಿ ಜವಾಬ್ದಾರಿಯುತ ಭಾಗೀದಾರ ದೇಶವಾಗಿದ್ದು, ಈ ಪ್ರಾಂತ್ಯದಲ್ಲಿ ಶಾಂತಿ, ಸ್ಥಿರತೆ ಕಾಪಾಡುವುದು ಅಷ್ಟೇ ಜವಾಬ್ದಾರಿಯಾಗಿದೆ ಎಂದು ಹೇಳಿದರು. ಸಮುದ್ರ ಮಾರ್ಗಗಳ ಮೂಲಕ ಭಾರತದ ವಾಣಿಜ್ಯದ ಶೇಕಡ ೯೦ರಷ್ಟು ಪ್ರಮಾಣ ಸಾಗುತ್ತಿರುವುದರಿಂದ ದೇಶದ ಆರ್ಥಿಕ ಪ್ರಗತಿ, ಇಂಧನ ಭದ್ರತೆ ಮತ್ತು ದ್ವೀಪಗಳ ರಕ್ಷಣೆಗೆ ಸಾಗರ ಭದ್ರತೆ ಪ್ರಮುಖವಾಗಿದೆ. ಯುದ್ಧ ಸ್ವರೂಪವು ತೀವ್ರ ಬದಲಾವಣೆಯಾಗುತ್ತಿದ್ದು, ಮುಂದಿನ ದಿನಗಳಲ್ಲಿ ಸಂಘರ್ಷಗಳು ಸಹ ಹೊಸ ರೂಪ ಪಡೆಯಲಿವೆ. ಈ ನಿಟ್ಟಿನಲ್ಲಿ ಸಶಸ್ತ್ರ ಪಡೆಗಳು ತಮ್ಮ ಕೌಶಲ್ಯಗಳನ್ನು ಹೆಚ್ಚಿಸಿಕೊಂಡು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕು. ಹೊಸ ಭದ್ರತಾ ಸವಾಲುಗಳನ್ನು ಎದುರಿಸಲು ದೈಹಿಕವಾಗಿ ಮತ್ತು ಮಾನಸಿಕವಾಗಿ ಸಿದ್ಧರಾಗಿರಬೇಕು ಎಂದು ಸಚಿವರು ಕರೆ ನೀಡಿದರು. ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ಕೃಷ್ಣಸ್ವಾಮಿನಾಥನ್, ಈಸ್ಟರ್ನ್ ನೇವಲ್ ಕಮಾಂಡ್‌ನ ಫ್ಲಾಗ್ ಆಫೀಸರ್ ಕಮಾಂಡಿಂಗ್ ಇನ್ ಚೀಫ್ ವೈಸ್ ಅಡ್ಮಿರಲ್ ಸಂಜಯ್ ಭಲ್ಲಾ ಹಾಗೂ ನೌಕಾಪಡೆಯ ಇತರ ಹಿರಿಯ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಈ ಸ್ಟೆಲ್ತ್ ಫ್ರಿಗೇಟ್ ಅನ್ನು ಭಾರತೀಯ ನೌಕಾಪಡೆಯ ಯುದ್ಧನೌಕೆ ವಿನ್ಯಾಸ ಬ್ಯೂರೋ ದೇಶೀಯವಾಗಿ ವಿನ್ಯಾಸಗೊಳಿಸಿದೆ ಮತ್ತು ಮುಂಬೈನ ಮಜಗಾನ್ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್ ನಿರ್ಮಿಸಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಪೂರ್ವ ಘಟ್ಟಗಳಲ್ಲಿರುವ ಭವ್ಯ ಮಹೇಂದ್ರಗಿರಿ ಪರ್ವತಶ್ರೇಣಿಯ ಹೆಸರನ್ನು ಈ ಯುದ್ಧನೌಕೆಗೆ ನಾಮಕರಣ ಮಾಡಲಾಗಿದೆ.

ಆಧುನಿಕ ಸಂಯೋಜಿತ ಅನಿಲ ಚಾಲನಾ ವ್ಯವಸ್ಥೆಯನ್ನು ಹೊಂದಿರುವ ಈ ಯುದ್ಧನೌಕೆಯು, ಸಮುದ್ರ ಕಾರ್ಯಾಚರಣೆಗಳ ಎಲ್ಲ ವಿಧದ ಕಾರ್ಯಗಳಲ್ಲಿ ಹೆಚ್ಚಿನ ವೇಗ ಮತ್ತು ದೀರ್ಘಾವಧಿಯ ಕಾರ್ಯಾಚರಣೆಯ ಸಾಮರ್ಥ್ಯವನ್ನು ಹೊಂದಿದೆ. ಶೇಕಡಾ ೭೫ಕ್ಕೂ ಹೆಚ್ಚು ಸ್ವದೇಶಿ ಘಟಕಗಳನ್ನು ಒಳಗೊಂಡಿರುವ ಮಹೇಂದ್ರಗಿರಿ ಯುದ್ಧನೌಕೆಯು ಕೇಂದ್ರ ಸರ್ಕಾರದ ಆತ್ಮನಿರ್ಭರ ಭಾರತ ಅಭಿಯಾನದ ಯಶಸ್ಸಿಗೆ ಅತ್ಯುತ್ತಮ ಉದಾಹರಣೆಯಾಗಿದೆ ಎಂದು ಸಚಿವಾಲಯ ತಿಳಿಸಿದೆ.

********

ಮುಂಬರುವ ಮುಂಗಾರು ಅಧಿವೇಶನದ ಸಿದ್ಧತೆಗಳನ್ನು ಸಂಸದೀಯ ವ್ಯವಹಾರಗಳ ಖಾತೆ ರಾಜ್ಯ ಸಚಿವ ಅರ್ಜುನ್ ರಾಮ್ ಮೇಘವಾಲ್ ಮತ್ತು ಸಚಿವ ಡಾ.ಎಲ್.ಮುರುಗನ್ ಸಂಸತ್ ಭವನದಲ್ಲಿ ನಿನ್ನೆ ಪರಿಶೀಲಿಸಿದರು. ಸಂಸತ್ತಿನ ಮುಂಗಾರು ಅಧಿವೇಶನ, ಇದೇ ೨೦ ರಂದು ಆರಂಭಗೊಂಡು, ಆಗಸ್ಟ್ ೧೩ರವರೆಗೆ ನಡೆಯಲಿದೆ. ಮುಂಬರುವ ಅಧಿವೇಶನಕ್ಕೆ ನಿಗದಿಪಡಿಸಲಾದ ಶಾಸಕಾಂಗ ವ್ಯವಹಾರಗಳ ಸಮಗ್ರ ಪರಿಶೀಲನೆಯನ್ನು ನಡೆಸಲಾಗಿದೆ ಮತ್ತು ಅಗತ್ಯ ಮಾರ್ಗಸೂಚಿಗಳನ್ನು ನೀಡಲಾಗಿದೆ ಎಂದು ಸಚಿವ ಮೇಘವಾಲ್ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

********

ಫಿಫಾ ವಿಶ್ವಕಪ್ ಫುಟ್ಬಾಲ್ ಪಂದ್ಯವಳಿಯ ಎರಡನೇ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಸ್ಪೇನ್ ತಂಡವು ಬೆಲ್ಜಿಯಂ ವಿರುದ್ಧ ೨-೧ ಗೋಲುಗಳ ಅಂತರದಿಂದ ರೋಚಕ ಜಯ ಸಾಧಿಸಿ ಸೆಮಿಫೈನಲ್‌ಗೆ ಪ್ರವೇಶಿಸಿದೆ. ಅಮೆರಿಕದ ಲಾಸ್ ಏಂಜಲೀಸ್ ಸ್ಟೇಡಿಯಂನಲ್ಲಿ ಕಳೆದ ರಾತ್ರಿ ನಡೆದ ಪಂದ್ಯದ ಮೊದಲಾರ್ಧದ ಮುಕ್ತಾಯಕ್ಕೆ ಉಭಯ ತಂಡಗಳು ೧-೧ ಗೋಲುಗಳಿಂದ ಸಮಬಲ ಸಾಧಿಸಿದ್ದವು. ಪಂದ್ಯದ ೩೦ನೇ ನಿಮಿಷದಲ್ಲಿ ಫ್ಯಾಬಿಯನ್ ರೂಯಿಜ್ ಗೋಲು ಗಳಿಸಿ ಸ್ಪೇನ್‌ಗೆ ಮುನ್ನಡೆ ತಂದುಕೊಟ್ಟರು. ಇದಕ್ಕೆ ತಕ್ಕ ತಿರುಗೇಟು ನೀಡಿದ ಬೆಲ್ಜಿಯಂ ತಂಡ ೪೦ನೇ ನಿಮಿಷದಲ್ಲಿ ಚಾರ್ಲ್ಸ್ ಡಿ ಕೆಟೆಲೇರೆ ಅವರ ಗೋಲಿನ ಮೂಲಕ ಸಮಬಲ ಸಾಧಿಸಿತು. ತದನಂತರ ೮೮ನೇ ನಿಮಿಷದಲ್ಲಿ ಮೈಕೆಲ್ ಮೆರಿನೊ ಸ್ಪೇನ್ ಪರ ಗೋಲು ಗಳಿಸಿ ಜಯ ತಮ್ಮದಾಗಿಸಿಕೊಂಡರು.

ಇಂದು ರಾತ್ರಿ ಮಿಯಾಮಿ ಗಾರ್ಡನ್ಸ್‌ನಲ್ಲಿ ನಡೆಯಲಿರುವ ಮೂರನೇ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ನಾರ್ವೆ ತಂಡ, ಇಂಗ್ಲೆಂಡ್ ಸವಾಲನ್ನು ಎದುರಿಸಲಿದ್ದು, ಈ ಪಂದ್ಯವು ಭಾರತೀಯ ಕಾಲಮಾನ ಇಂದು ಮಧ್ಯರಾತ್ರಿ ೧:೩೦ಕ್ಕೆ ಆರಂಭವಾಗಲಿದೆ. ನಾಳೆ ಕಾನ್ಸಾಸ್ ಸಿಟಿಯಲ್ಲಿ ನಡೆಯಲಿರುವ ನಾಲ್ಕನೇ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಅರ್ಜೆಂಟೀನಾ ತಂಡ ಸ್ವಿಟ್ಜರ್ಲೆಂಡ್ ತಂಡವನ್ನು ಎದುರಿಸಲಿದೆ.

********